ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 234(298)

ಸದಸ್ಯರ ಹೆಸರು : ಡಾ|| ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 12.08.2025

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಬಾಕಿ ಇರುವ ಆಯಾ ವರ್ಷದ ಆಸ್ತಿ ತೆರಿಗೆ ಹಾಗೂ ನೀರಿನ ಕರ ವಸೂಲಿ ಸಂಗ್ರಹಕ್ಕೆ ಸ್ತ್ರೀ ಶಕ್ತಿಯ ಸಂಘ ಬಳಸಿಕೊಳ್ಳಲು ಸರ್ಕಾರದಿಂದ ಆದೇಶವಾಗಿದೆಯೇ: (ಪ್ರತಿಯನ್ನು ಒದಗಿಸುವುದು)	ಹೌದು. ಸರ್ಕಾರದ ಆದೇಶ ಸಂಖ್ಯೆ: ನಅಇ 18 ಜಿಇಎಲ್ 2024(ಇ) ದಿನಾಂಕ: 27.6.2024 ರ ಆದೇಶದಲ್ಲಿ ಅವಕಾಶ ಕಲ್ಪಿಸಲಾಗಿದೆ. **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ಆದೇಶವಿದ್ದಲ್ಲಿ, ಪ್ರಸ್ತುತ ಎಷ್ಟು ಜಿಲ್ಲೆಗಳಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ: ಸ್ತ್ರೀಶಕ್ತಿಯ ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳಲು ಇರುವ ಮಾನದಂಡಗಳೇನು: (ಮಾನದಂಡಗಳ ಪ್ರತಿ ನೀಡುವುದು)	ತುಮಕೂರು ಬಳ್ಳಾರಿ ಹಾಗೂ ದಾವಣಗೆರೆ ಮಹಾನಗರ ಪಾಲಿಕೆಗಳಲ್ಲಿ ಮಡಿಕೇರಿ ನಗರಸಭೆ ಮತ್ತು ಕುಂದಾಪುರ ಪುರಸಭೆಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದು ಉಳಿದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ ಹಾಗೂ ಮಾನದಂಡಗಳ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
ಇ)	ಈ ಕಾರ್ಯದಲ್ಲಿ ಭಾಗಿಯಾಗುವ ಸ್ತ್ರೀಶಕ್ತಿ ಮಹಿಳೆಯರಿಗೆ ನೀಡುತ್ತಿರುವ ಪ್ರೋತ್ಸಾಹ ಧನ ಎಷ್ಟು:	ಸ್ವಸಹಾಯ ಗುಂಪುಗಳು ವಸೂಲಾತಿ ಮಾಡುವ ನೀರಿನ ಶುಲ್ಕದ ಶೇ.5 ರಷ್ಟನ್ನು ಮತ್ತು ಬಾಕಿ ಇರುವ ಆಸ್ತಿ ತೆರಿಗೆಯ ಮೂಲ ಮೊತ್ತದ ಶೇ.5 ರಷ್ಟನ್ನು ಪ್ರೋತ್ಸಾಹ ಧನದ ರೂಪದಲ್ಲಿ ನೀಡಲು ಅವಕಾಶವಿರುತ್ತದೆ.
ಈ)	ಈ ಮಾದರಿ ಅಳವಡಿಕೆಯ ನಂತರ ನಗರ ಪಾಲಿಕೆ ಹಾಗೂ ಪುರಸಭೆಯಲ್ಲಿ ತೆರಿಗೆ ಸಂಗ್ರಹ ಹೆಚ್ಚಳವಾಗಿದೆಯೇ?	• ತುಮಕೂರು ಮಹಾನಗರ ಪಾಲಿಕೆಯಲ್ಲಿ 03 ಸ್ವಸಹಾಯ ಸಂಘಗಳನ್ನು ನೀರಿನ ತೆರಿಗೆ ಸಂಗ್ರಹಕ್ಕೆ ಆಯ್ಕೆ ಮಾಡಲಾಗಿರುತ್ತದೆ. ಏಪ್ರಿಲ್-2025 ರಿಂದ ಜುಲೈ-2025 ರವರೆಗೆ ರೂ.10,87,550/- ಗಳ ನೀರಿನ ತೆರಿಗೆ ವಸೂಲಾತಿ ಮಾಡಲಾಗಿರುತ್ತದೆ. • ಉಳಿದ ಜಿಲ್ಲೆಗಳಲ್ಲಿ ಸರ್ಕಾರದ ಆದೇಶದಂತೆ ಹಾಗೂ ಕೌನ್ಸಿಲ್ ಸಭೆಯ ನಿರ್ಣಯದೊಂದಿಗೆ ಆಸ್ತಿ ತೆರಿಗೆ ವಸೂಲಾತಿಗಾಗಿ ಮಹಿಳಾ ಸ್ವಸಹಾಯ ಸಂಘಗಳನ್ನು ತೊಡಗಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದ್ದು ಮುಂದಿನ ದಿನಗಳಲ್ಲಿ ತೆರಿಗೆ ಹೆಚ್ಚಳವಾಗುವ ನಿರೀಕ್ಷೆ ಇದೆ.

ಇ-ಸಂಖ್ಯೆ: ನಅಇ 191 ಜಿಇಎಲ್ 2025

(ರಹೀಂ ಖಾನ್)

ಪೌರಾಡಳಿತ ಮತ್ತು ಹಜ್ ಸಚಿವರು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ಸಮರ್ಪಕ ವಸೂಲಾತಿಗಾಗಿ ಸ್ಥಳೀಯ ಮಹಿಳಾ ಸ್ವ-ಸಹಾಯ ಗುಂಪುಗಳ ಸೇವೆಯನ್ನು ಪಡೆಯುವ ಕುರಿತು.

ಓದಲಾಗಿದೆ: ಪೌರಾಡಳಿತ ನಿರ್ದೇಶನಾಲಯದ ಏಕ ಕಡತ ಸಂಖ್ಯೆ: DMA/DEV/OTH/18/2024-DMA_DEV

02 JUL 2024
DMA/AD, Admin

ಪ್ರಸ್ತಾವನೆ:

ಮೇಲೆ ಓದಲಾದ ಏಕ ಕಡತದಲ್ಲಿ, ಪೌರಾಡಳಿತ ನಿರ್ದೇಶಕರು ತಮ್ಮ ಪ್ರಸ್ತಾವನೆಯಲ್ಲಿ ಬೆಂಗಳೂರು ನಗರವನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದಲ್ಲಿ 315 ನಗರ ಸ್ಥಳೀಯ ಸಂಸ್ಥೆಗಳಿದ್ದು, ಅವುಗಳಲ್ಲಿ 10 ಮಹಾನಗರ ಪಾಲಿಕೆಗಳು, 61 ನಗರಸಭೆಗಳು, 126 ಪುರಸಭೆಗಳು, 114 ಪಟ್ಟಣ ಪಂಚಾಯತಿಗಳು ಮತ್ತು 4 ನೋಟಿಫೈಡ್ ಪ್ರದೇಶಗಳಿರುತ್ತವೆ. 2025ರ ಇಸವಿ ಅಂತ್ಯಕ್ಕೆ ನಗರ ಸ್ಥಳೀಯ ಸಂಸ್ಥೆಗಳ ಜನಸಂಖ್ಯೆ ಸುಮಾರು 202.58 ಲಕ್ಷವಾಗಲಿದ್ದು, ಸುಮಾರು 51.51 ಲಕ್ಷ ಮನೆಗಳೊಳಗೊಂಡಿರುತ್ತವೆ. ಅವುಗಳಲ್ಲಿ 30.05 ಲಕ್ಷ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸಲಾಗಿದೆ ಮತ್ತು 21.46 ಲಕ್ಷಮನೆಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸುವುದು ಬಾಕಿಯಿರುತ್ತವೆ. ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿಯಲ್ಲಿ 248 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎಲ್ಲಾ ಮನೆಗಳಿಗೂ ಕುಡಿಯುವ ನೀರಿನ ಸಂಪರ್ಕವನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅವಶ್ಯಕ ಕುಡಿಯುವ ನೀರು ಸರಬರಾಜು ಮಾಡಲು ಪ್ರತಿದಿನ 3418.54 ದಶ ಲಕ್ಷ ಲೀ. ನೀರಿನ ಅವಶ್ಯಕತೆಯಿದೆ. ಅದರಲ್ಲಿ, ನದಿ ಮತ್ತು ಕೆರೆಮೂಲಗಳಿಂದ ಪ್ರತಿದಿನ 2320.00 ದಶಲಕ್ಷ ಲಿಟರ್ ಶುದ್ಧೀಕರಿಸಿದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತಿದ್ದು, ಇನ್ನೂ ಕೊರತೆಯಿರುವ 1098.54 ದಶಲಕ್ಷ ಲೀ. ನೀರಿನ್ನು ಸರಬರಾಜು ಮಾಡಲು ಅವಶ್ಯಕತೆಯಿದೆ. ಆದ್ದರಿಂದ, ನೀರಿನ ವಿತರಣೆಯಲ್ಲಿ ಉಂಟಾಗುವ ನೀರಿನ ನಷ್ಟವನ್ನು ಕಡಿಮೆ ಮಾಡುವುದರ ಜೊತೆಗೆ ಬಳಕೆಗೆ ತಕ್ಕಂತೆ ನೀರಿನ ಶುಲ್ಕ ಸಂಗ್ರಹಣೆ ಮಾಡುವುದು ಅನಿವಾರ್ಯತೆ ಉಂಟಾಗಿದೆ.

2024-25ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಆಸ್ತಿಗಳ ಮೇಲೆ ತೆರಿಗೆ ವಸೂಲಿ ಮಾಡಬೇಕಾದ ಆಸ್ತಿ ತೆರಿಗೆ ಮೊತ್ತ ರೂ.1860.17 ಕೋಟಿಗಳಾಗಿದ್ದು, ಇದರ ಜೊತೆಗೆ ನೀರಿನ ಶುಲ್ಕ ಸಂಗ್ರಹಣೆ ಹಾಗೂ ನೀರಿನ ಬೇ-ಬಾಕಿ ವಸೂಲಾತಿ ಮಾಡುವುದು ಅತಿ ಅವಶ್ಯವಿದೆ.

ರಾಜ್ಯದಲ್ಲಿನ ಒಟ್ಟು ನಗರ ಸ್ಥಳೀಯ ಸಂಸ್ಥೆಗಳ ಪೈಕಿ 29 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಾತ್ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ನೀರಿನ ಸಂಪರ್ಕ ಹಾಗೂ ನೀರಿನ ಶುಲ್ಕ ವಸೂಲಾತಿ ಮತ್ತು ಮೇಲ್ವಿಚಾರಣೆಯನ್ನು ನಡೆಸಲಾಗುತ್ತಿದೆ.

ಉಳಿದ 285 ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧೀನ ಸಿಬ್ಬಂದಿಗಳ ಮೂಲಕ ತಮ್ಮಿಂದಲೇ ನೀರಿನ ಸಂಪರ್ಕ ಹಾಗೂ ನೀರಿನ ಶುಲ್ಕ ವಸೂಲಾತಿ ಮತ್ತು ಮೇಲ್ವಿಚಾರಣೆಯನ್ನು ನಡೆಸುತ್ತಾ ಬಂದಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮೇಲ್ವಿಚಾರಣೆಗೊಳಿಸಲಾಗುತ್ತಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಬಾಕಿ ಉಳಿಸಿಕೊಂಡಿರುವ ನೀರಿನ ಶುಲ್ಕದ ಜೊತೆಗೆ ಬಡ್ಡಿಯನ್ನು ಸಹ ವಿಧಿಸಿ ವಸೂಲಿ

27.6.2024

[illegible]ಲಾಗುತ್ತಿದೆ. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿ ತಿಂಗಳು ನೀರಿನ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪ್ರತಿ ತಿಂಗಳು ಬಾಕಿ ಇರುವ ನೀರಿನ ಶುಲ್ಕದೊಂದಿಗೆ ಬಡ್ಡಿ ಮೊತ್ತವನ್ನು ಸಹ ವಸೂಲಿ ಮಾಡಲಾಗುತ್ತಿದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕರು ಪಾವತಿಸಬೇಕಾಗಿರುವ ನೀರಿನ ಶುಲ್ಕದ ಬಗ್ಗೆ 2011ರಲ್ಲಿ ಸರ್ಕಾರದ ಸುತ್ತೋಲೆ ಹೊರಡಿಸಿದ್ದು ಅದರಂತೆ, ಬಳಕೆಗೆ ತಕ್ಕಂತೆ ನೀರಿನ ದರ ಮತ್ತು ಮಾಸಿಕ ಕನಿಷ್ಠ ದರದ (fixed rate) ಮಾಹಿತಿಯನ್ನು ಈ ಕೆಳಕಂಡಂತೆ ನಮೂದಿಸಿ ವಿವರಿಸಿದೆ.

ಎ) ಬಳಕೆಗೆ ತಕ್ಕಂತೆ ವಿಧಿಸಲಾಗುತ್ತಿರುವ ನೀರಿನ ದರ:-

ಗ್ರಾಹಕ ವರ್ಗ	ನೀರಿನ ಬಳಕೆಗೆ ಅನುಗುಣವಾಗಿ ಪ್ರತಿ ತಿಂಗಳು ವಿಧಿಸಲಾಗುವ ದರ			
	ದರದ ಹಂತ ಬಳಕೆಯ ದರ			ಪ್ರತಿ ಸಂಪರ್ಕಕ್ಕೆ ಕನಿಷ್ಠ ದರ
	ಕನಿಷ್ಠ ಕಿ.ಲೀ	ಗರಿಷ್ಠ ಕಿ.ಲೀ	ರೂ/ಕಿ.ಲೀ ರೂ/ಕಿ.ಲೀ	
ಗೃಹ ಸಂಪರ್ಕ	0	8	7.00	ರೂ.56/-
	8	15	9.00	
	15	25	11.00	
	25 ಕ್ಕಿಂತ	ಅಧಿಕ	13.00	
ಗೃಹೇತರ ಸಂಪರ್ಕ	0	8	14.00	ರೂ.112/-
	8	15	18.00	
	15	25	22.00	
	25 ಕ್ಕಿಂತ	ಅಧಿಕ	26.00	
ವಾಣಿಜ್ಯ/ ಕೈಗಾರಿಕೆ	0	8	28.00	ರೂ.224/-
	8	15	36.00	
	15	25	44.00	
	25 ಕ್ಕಿಂತ	ಅಧಿಕ	52.00	

ಬಿ) ಮೀಟರ್ ಹೊಂದದೆ ಇರುವಂತಹ ಸಂಪರ್ಕಕ್ಕೆ ವಿಧಿಸಲಾಗುತ್ತಿರುವ ಮಾಸಿಕ ಕನಿಷ್ಠ ದರ:

ಕ್ರಮ ಸಂಖ್ಯೆ	ಗ್ರಾಹಕ ವರ್ಗ	ಪ್ರತಿ ಸಂಪರ್ಕಕ್ಕೆ ಮಾಸಿಕ ಕನಿಷ್ಠ ದರ (ರೂ.ಗಳಲ್ಲಿ)		
		ಮಹಾನಗರ ಪಾಲಿಕೆಗಳು	ನಗರಸಭೆಗಳು	ಪುರಸಭೆಗಳು/ ಪಟ್ಟಣ ಪಂಚಾಯಿತಿಗಳು
1.	ಗೃಹಬಳಕೆ	175	120	80
2.	ಗೃಹೇತರ ಬಳಕೆ	350	240	160
3.	ವಾಣಿಜ್ಯ/ ಕೈಗಾರಿಕೆ	700	480	320

ಮೇಲಿನ ಕೋಷ್ಟಕಗಳಲ್ಲಿ ನಮೂದಿಸಿರುವ ಮಾಹಿತಿಯಂತೆ ಬೆಂಗಳೂರು ನಗರವನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದ 315 ಸ್ಥಳೀಯ ಸಂಸ್ಥೆಗಳಲ್ಲಿ ನೀರಿನ ಬಳಕೆ ಶುಲ್ಕ ಸಂಗ್ರಹಿಸಲಾಗುತ್ತಿದೆ. ಅದರಲ್ಲಿ 29 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಮೀಟರ್ ಅಳವಡಿಕೆ ಮಾಡಲಾಗಿದೆ. ಉಳಿದ 286 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೀಟರ್ ಸಂಪರ್ಕ ಕಲ್ಪಿಸಿರುವುದಿಲ್ಲ. ದಿನಾಂಕ 31-10-2023ರ ಅಂತ್ಯಕ್ಕೆ ಬಾಕಿ ಇರುವ ಶುಲ್ಕದ ಬಾಕಿ ಮೊತ್ತ ಮತ್ತು ಬಡ್ಡಿ ಬಾಕಿ ಇರುವ ಮೊತ್ತದ ಮಾಹಿತಿಯನ್ನು ಈ ಕೆಳಕಂಡಂತಿದೆ;

ಸೆಲೀಶ್ ಗಾಜಿ
27.6.2024

ಕ್ರ. ಸಂ	ನೀರಿನ ಬಳಕೆ ಶುಲ್ಕದ ಬಾಕಿ ಮೊತ್ತ	ಒಟ್ಟು ಬಾಕಿಯಿರುವ ಬಡ್ಡಿ ಮೊತ್ತ	ಒಟ್ಟು ನೀರಿನ ಬಳಕೆ ಶುಲ್ಕದ ಬಾಕಿ ಮೊತ್ತ
1	1141.31	167.05	1308.35

ಈ ಮೇಲ್ಕಾಣಿಸಿದ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಬಾಕಿ ನೀರಿನ ಬಳಕೆ ಶುಲ್ಕದ ಮೊತ್ತ (ಶುಲ್ಕ + ಬಡ್ಡಿ) ರೂ.1308.35ಕೋಟಿ ಇದರ ಜೊತೆಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ವ್ಯಾಪ್ತಿಯಲ್ಲಿನ ಆಸ್ತಿಗಳಿಂದ ವಸೂಲಿ ಮಾಡಬೇಕಾದ ಆಸ್ತಿ ತೆರಿಗೆ ಮೊತ್ತ ರೂ.1860.17 ಕೋಟಿ ಸೇರಿ ಹೀಗೆ ಅಂದಾಜು ಒಟ್ಟು ರೂ.3,168.52 ಕೋಟಿಗಳ [illegible] ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ.

2024-25ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಸೂಲಾತಿ ಮಾಡಲಾಗುತ್ತಿರುವ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಸ್ಥಳೀಯ ಮಹಿಳಾ ಸ್ವ-ಸಹಾಯ ಗುಂಪುಗಳ ಸೇವೆಯನ್ನು ಪಡೆಯುವುದಾಗಿ ಸರ್ಕಾರ ಘೋಷಿಸಿದೆ.

ಪೌರಾಡಳಿತ ನಿರ್ದೇಶಕರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ;

ಸರ್ಕಾರದ ಆದೇಶ ಸಂಖ್ಯೆ: ನಅಇ 18 ಜಿಇಎಲ್ 2024(ಇ)
ಬೆಂಗಳೂರು, ದಿನಾಂಕ: 27.06:2024.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರವನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನೀರಿನ ಬಳಕೆ ಶುಲ್ಕದ ಹಿಂದಿನ ಬಾಕಿ ಮೊತ್ತ ಬಡ್ಡಿಸಹಿತವಾಗಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರಸ್ತುತ ವಾರ್ಷಿಕ ಬೇಡಿಕೆ ಸಹಿತ ವಸೂಲಿ ಮಾಡತಕ್ಕದ್ದು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ಮತ್ತು ವಾರ್ಷಿಕ ಬೇಡಿಕೆಗಳಿಗನುಗುಣವಾಗಿ ಆಸ್ತಿಗಳಿಂದ ವಸೂಲಿ ಮಾಡಬೇಕಾದ ಆಸ್ತಿ ತೆರಿಗೆಯನ್ನು ಸಮರ್ಪಕ ವಸೂಲಿ ಮಾಡತಕ್ಕದ್ದು, ಈ ವಸೂಲಿ ಕಾರ್ಯಕ್ಕೆ ಸ್ಥಳೀಯ ಮಹಿಳಾ ಸ್ವ-ಸಹಾಯ ಗುಂಪುಗಳ ಸೇವೆಯನ್ನು ಪಡೆಯತಕ್ಕದ್ದು ಮತ್ತು ಸದರಿ ಸ್ವ-ಸಹಾಯ ಗುಂಪುಗಳಿಗೆ ವಸೂಲಾದ ಮೊತ್ತದಲ್ಲಿನ ಶೇ.5ರಷ್ಟನ್ನು ಪ್ರೋತ್ಸಾಹ ಧನರೂಪದಲ್ಲಿ ನೀಡಲು ಆದೇಶಿಸಿದೆ.

<u>ಷರತ್ತುಗಳು:</u>

1. ರಾಜ್ಯದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ಪ್ರತಿನಿಧಿಸುವ ಸ್ವ- ಸಹಾಯ ಗುಂಪುಗಳು (SHG)/ಸರ್ಕಾರೇತರ ಸಂಸ್ಥೆಗಳು / ಸ್ತ್ರೀ-ಶಕ್ತಿ ಗುಂಪುಗಳಿಂದ ಸೇವೆಯನ್ನು ಬಳಸಿಕೊಂಡು, ಪ್ರಸ್ತುತ ವಾರ್ಷಿಕ ಬೇಡಿಕೆ ಸಹಿತ ನೀರಿನ ಶುಲ್ಕ ಬಾಕಿ (ಶುಲ್ಕ + ಬಡ್ಡಿ) ಸಂಗ್ರಹಣೆ / ವಸೂಲಾತಿ ಮಾಡುವ ಮೊತ್ತದ ಶೇ.5% ರಷ್ಟನ್ನು ಪ್ರೋತ್ಸಾಹ ಧನ ರೂಪದಲ್ಲಿ ನೀಡುವುದು.
2. ರಾಜ್ಯದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಮಹಿಳಾ ಪ್ರತಿನಿಧಿಸುವ ಸ್ವ-ಸಹಾಯ ಗುಂಪುಗಳು (SHG)/ಸರ್ಕಾರೇತರ ಸಂಸ್ಥೆಗಳು / ಸ್ತ್ರೀ-ಶಕ್ತಿ ಗುಂಪುಗಳಿಂದ ಸೇವೆಯನ್ನು

ಸೋಲಾಶ್-ಶಾಸ್ತ್ರಿ
27.6.2024

[illegible] ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಆಸ್ತಿಗಳ ಮೇಲ ತೆರಿಗ ವಸೂಲಿ ಮಾಡಬೇಕಾದ ವಾರ್ಷಿಕ ಬೇಡಿಕೆಗಳ ಅನುಗುಣವಾಗಿ ಬಹುದಿನಗಳಿಂದ ಬಾಕಿಯಿರುವ ಆಸ್ತಿ ತೆರಿಗೆ ಮೊತ್ತ (ತೆರಿಗೆ + ಬಡ್ಡಿ) ಸಂಗ್ರಹಣೆ /ವಸೂಲಾತಿ ಮಾಡುವ ಮೊತ್ತದ ಶೇ.5% ರಷ್ಟನ್ನು ಪ್ರೋತ್ಸಾಹ ಧನ ರೂಪದಲ್ಲಿ ನೀಡುವುದು.

3. ಜಿಲ್ಲಾವಾರು ತಂಡವನ್ನು ರಚಿಸಿ ಬಾಕಿ ಇರುವ ಆಸ್ತಿ ತೆರಿಗೆ (ತೆರಿಗೆ +ಬಡ್ಡಿ) ವಸೂಲಾತಿ ಮಾಡಿರುವ ಮಾಹಿತಿ ಜೊತೆಗೆ ನೀರಿನ ಬಳಕೆ ಶುಲ್ಕ (ಶುಲ್ಕ+ಬಡ್ಡಿ)ಯನ್ನು ವಸೂಲಾತಿ ಮಾಡಿರುವ ಮಾಹಿತಿಯೊಂದಿಗೆ ಪ್ರತಿ ತಿಂಗಳು ಕೈಗೊಂಡ ಪ್ರಗತಿಯ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

4. ಈ ಮೇಲ್ಕಾಣಿಸಿದ ರೀತಿಯಲ್ಲಿ ನೀರಿನ ಶುಲ್ಕ ಮತ್ತು ಆಸ್ತಿ ಮೇಲಿನ ಆಸ್ತಿ ತೆರಿಗೆ ಸಂಗ್ರಹಣೆ/ವಸೂಲಾತಿ ಮಾಡಲು ಆಯುಕ್ತರುಗಳು / ಮುಖ್ಯಾಧಿಕಾರಿಗಳಿಗೆ ಸಂಪೂರ್ಣ ಜವಾಬ್ದಾರಿಯನ್ನು ನೀಡಿದೆ. ಸದರಿ ಜವಾಬ್ದಾರಿಯಿಂದ ವಿಫಲವಾದಲ್ಲಿ ಅವರುಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

5. ಈ ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರುವ ಸಂಬಂಧ ಪೌರಾಡಳಿತ ನಿರ್ದೇಶನಾಲಯವು ಸ್ಪಷ್ಟವಾದ ಮಾರ್ಗಸೂಚಿಗಳನ್ನು ಹೊರಡಿಸುವುದು.

ಈ ಆದೇಶವನ್ನು ಕರ್ನಾಟಕ ಸರ್ಕಾರದ ಸಚಿವ ಸಂಪುಟ ಟಿಪ್ಪಣಿಯ ವಿಷಯ ಸಂಖ್ಯೆ: 308/2024, ದಿನಾಂಕ: 20.06.2024ರಂದು ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಸತೀಶ್ ಕಬಾಡಿ) 27-6-2024
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
(ಪೌರಾಡಳಿತ-2 ಮತ್ತು ಮಂಡಳಿ)

ಪ್ರತಿಯನ್ನು:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ ರವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

1. ಪ್ರಧಾನ ಮಹಾ ಲೇಖಪಾಲರು, (ಎ ಮತ್ತು ಇ), ಕರ್ನಾಟಕ ರಾಜ್ಯ, ಬೆಂಗಳೂರು.
2. ನಿರ್ದೇಶಕರು, ಪೌರಾಳಿತ ನಿರ್ದೇಶನಾಲಯ, ವಿವಿ ಗೋಪುರ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
4. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ. ವಿಕಾಸಸೌದ, ಬೆಂಗಳೂರು.
5. ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರುಗಳು, (ಬಿಬಿಎಂಪಿ ಹೊರತು ಪಡಿಸಿ)
6. ರಾಜ್ಯದ ಎಲ್ಲಾ ನಗರಸಭೆಗಳು/ ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರುಗಳು, ಮುಖ್ಯಾಧಿಕಾರಿಗಳು.
   (ಕ್ರ.ಸಂ. 3 ರಿಂದ 6, ಪೌರಾಡಳಿತ ನಿರ್ದೇಶಕರ ಮುಖಾಂತರ)
7. ಶಾಖೆಯ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

******

ಅನುಬಂಧ-2

ನಿರ್ದೇಶಕರ ಕಚೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

[illegible]

ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

ವಿಷಯ: ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ಸಮರ್ಪಕ ವಸೂಲಾತಿಗಾಗಿ ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳನ್ನು ತೊಡಗಿಸಿಕೊಂಡು ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ/ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ನಾಇ 18 ಜಿಇಎಲ್ 2024(ಇ) ಬೆಂಗಳೂರು, ದಿನಾಂಕ: 27.06.2024.
2. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರ ಪತ್ರ ಸಂಖ್ಯೆ:1198473/DMA/DEV/TAX/4/2023 ದಿನಾಂಕ: 28.06.2024

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದ 315 ನಗರ ಸ್ಥಳೀಯ ಸಂಸ್ಥೆಗಳಿದ್ದು, ಅವುಗಳ ಪೈಕಿ 10 ಮಹಾನಗರ ಪಾಲಿಕೆಗಳು, 61 ನಗರ ಸಭೆಗಳು, 126 ಪುರಸಭೆಗಳು, 114 ಪಟ್ಟಣ ಪಂಚಾಯಿತಿಗಳು ಮತ್ತು 4 ಅಧಿಸೂಚಿ ಪ್ರದೇಶ ಸಮಿತಿಗಳಿರುತ್ತವೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನೀರಿನ ಬಳಕೆಯ ಶುಲ್ಕದ ಹಿಂದಿನ ಬಾಕಿ ಮೊತ್ತ ಬಡ್ಡಿ ಸಹಿತವಾಗಿ ಮತ್ತು ಪ್ರಸ್ತುತ ವಾರ್ಷಿಕ ಬೇಡಿಕೆಯ ಸಹಿತ ವಸೂಲಿ ಮಾಡುವುದು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ವಾರ್ಷಿಕ ಬೇಡಿಕೆಗನುಗುಣವಾಗಿ ಸಮರ್ಪಕವಾಗಿ ವಸೂಲಿ ಮಾಡಲು ಸ್ಥಳೀಯ ಮಹಿಳಾ ಸ್ವಸಹಾಯ ಗುಂಪುಗಳ ಸೇವೆಯನ್ನು ಪಡೆಯಲು ಮತ್ತು ಸದರಿ ಸ್ವಸಹಾಯ ಗುಂಪುಗಳಿಗೆ ವಸೂಲಾದ ಮೊತ್ತದಲ್ಲಿ ಶೇಕಡ 5ರಷ್ಟನ್ನು ಪ್ರೋತ್ಸಾಹ ಧನದ ರೂಪದಲ್ಲಿ ನೀಡಲು ಆದೇಶಿಸಿದೆ. ಸದರಿ ಆದೇಶದಲ್ಲಿ ಈ ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರುವ ಸಂಬಂಧ ಪೌರಾಡಳಿತ ನಿರ್ದೇಶನಾಲಯದಿಂದ ಸ್ಪಷ್ಟವಾದ ಮಾರ್ಗಸೂಚಿಗಳನ್ನು ಹೊರಡಿಸಲು ನಿರ್ದೇಶಿಸಿದೆ.

ಈ ಸಂಬಂಧ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಅನುಷ್ಠಾನಗೊಳಿಸಲು ಉಲ್ಲೇಖ (2)ರ ಅಧಿಕೃತ ಜ್ಞಾಪನದಂತೆ ಸಮಿತಿಯನ್ನು ರಚಿಸಲಾಗಿರುತ್ತದೆ. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಜಿಲ್ಲಾ ಕೌಶಲ್ಯ ಮಿಷನ್ ರಾಜ್ಯದ ಎಲ್ಲಾ ಜಿಲ್ಲೆಗಳು, ನಗರ ಅಭಿಯಾನ ವ್ಯವಸ್ಥಾಪಕರು, ಉಲ್ಲೇಖ (1)ರ ಸರ್ಕಾರದ ಆದೇಶವನ್ನು ಅನುಷ್ಠಾನ ಮಾಡುವ ಸಂಬಂಧ ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

1. ಮಹಿಳಾ ಸ್ವ-ಸಹಾಯ ಸಂಘಗಳನ್ನು ತೊಡಗಿಸಿಕೊಳ್ಳಬೇಕಾದ ಕಾರ್ಯಕ್ರಮಗಳ ವಿವರ:

- ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಸ್ತಿಗಳ ಮೇಲೆ ತೆರಿಗೆ ವಸೂಲಾತಿ ಮಾಡಬೇಕಾದ ವಾರ್ಷಿಕ ವೇದಿಕೆಗಳ ಅನುಗುಣವಾಗಿ ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ವಸೂಲಾತಿ ಮಾಡುವುದು.
- ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಪ್ರಸಕ್ತ ವರ್ಷದ ಬೇಡಿಕೆ ಸಹಿತ ನೀರಿನ ಶುಲ್ಕ ಬಾಕಿಯನ್ನು ವಸೂಲಾತಿ ಮಾಡುವುದು.

2. ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿ ಮಾಡಲು ಆಸಕ್ತ ಅರ್ಹ ಮಹಿಳಾ ಸ್ವ-ಸಹಾಯ ಸಂಘಗಳು ಹೊಂದಿರಬೇಕಾದ ಅರ್ಹತಾ ಮಾನದಂಡ:

- ಆಸಕ್ತ ಮಹಿಳಾ ಸ್ವ-ಸಹಾಯ ಸಂಘವು ಈಗಾಗಲೇ ಡೇ-ನಲ್ಮ್ ಅಭಿಯಾನದಡಿ ನೋಂದಾಯಿಸಿರಬೇಕು ಹಾಗೂ ಪಂಚಸೂತ್ರಗಳನ್ನು ಅನುಸರಿಸುತ್ತಿರಬೇಕು (ನಿರಂತರ ಸಭೆ, ನಿರಂತರ ಉಳಿತಾಯ, ಆಂತರಿಕ ಸಾಲ ವಿತರಣೆ, ನಿಯಮಿತ ಸಾಲ ಮರುಪಾವತಿ ಮತ್ತು ದಾಖಲಾತಿ ನಿರ್ವಹಣೆ)
- ಆಸಕ್ತ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರು ಕನಿಷ್ಠ 7ನೇ ತರಗತಿಯ ವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ ಪರಿಕರಗಳನ್ನು ಬಳಸುವ ಸಾಮರ್ಥ್ಯ ಹೊಂದಿರಬೇಕು.
- ಸ್ವ-ಸಹಾಯ ಸಂಘವು ಸಂಘದ ಹೆಸರಿನಲ್ಲಿ ಸಕ್ರಿಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು
- ಬ್ಯಾಂಕಿನ ಮೂಲಕ ಅಥವಾ ಆಂತರಿಕ ಸಾಲ ಪಡೆದು ನಿಯಮಿತವಾಗಿ ಸಾಲ ಮರು ಪಾವತಿ ಮಾಡಿರಬೇಕು.
- ಸ್ವ-ಸಹಾಯ ಗುಂಪು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ನೋಂದಾಯಿಸಿಕೊಂಡು ಮಾನ್ಯತೆ ಇರುವ ಎಂಐಎಸ್ ಕೋಡ್ ಹೊಂದಿರಬೇಕು.
- ಸ್ವ-ಸಹಾಯ ಗುಂಪು ರಚನೆಯಾಗಿ ಕನಿಷ್ಠ 03 ವರ್ಷ ಪೂರೈಸಿರಬೇಕು.
- ಸ್ವ-ಸಹಾಯ ಗುಂಪು ಮತ್ತು ಗುಂಪಿನ ಸದಸ್ಯರು ಯಾವುದೇ ಅಪರಾಧ ಅಥವಾ ಸಮಾಜ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಹಿನ್ನಲೆಯನ್ನು ಹೊಂದಿರಬಾರದು.
- ನಗರ ಸ್ಥಳೀಯ ಸಂಸ್ಥೆಯಿಂದ ನಿಗದಿಪಡಿಸಲಾದ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿಯ ಗುರಿಗೆ ತಕ್ಕಂತೆ ಕಾರ್ಯನಿರ್ವಹಿಸಲು ಆಸಕ್ತಿ ಮತ್ತು ಬದ್ಧತೆಯನ್ನು ಹೊಂದಿರಬೇಕು

3. ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಪ್ರೋತ್ಸಾಹಧನ

- ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿ ಮಾಡಲು ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ವಸೂಲಾತಿ ಮಾಡುವ ಮೂಲ ಮೊತ್ತದ (ಇತರೆ ಇಲಾಖೆಗಳಿಗೆ ಪಾವತಿಸುವ ಉಪಕರಗಳನ್ನು ಹೊರತುಪಡಿಸಿ) ವಸೂಲಾತಿ ಮಾಡಲಾದ ನೀರಿನ ಶುಲ್ಕದ 5% ರಷ್ಟನ್ನು ಮತ್ತು ಬಹುದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ವಸೂಲಾತಿ ಮೊತ್ತದ ಶೇಕಡ 5ರಷ್ಟನ್ನು ಪ್ರೋತ್ಸಾಹ ಧನದ ರೂಪದಲ್ಲಿ ನೀಡುವುದು.
- ಪ್ರೋತ್ಸಾಹ ಧನವನ್ನು ಸಂಬಂಧಪಟ್ಟ ಮಹಿಳಾ ಸ್ವಸಹಾಯ ಸಂಘದ ಖಾತೆಗೆ ನಗರ ಸ್ಥಳೀಯ ಸಂಸ್ಥೆಯ ನಿಧಿಯಿಂದ ಪ್ರತಿ ಮಾಹೆ ಕಡ್ಡಾಯವಾಗಿ 10ನೇ ತಾರೀಖಿನೊಳಗಾಗಿ ವರ್ಗಾಯಿಸತಕ್ಕದ್ದು.
- ಮಹಿಳಾ ಸ್ವ-ಸಹಾಯ ಗುಂಪುಗಳು ವಸೂಲಿ ಮಾಡುವ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ಮೊತ್ತದ ವಿವರವನ್ನು ಪ್ರತ್ಯೇಕ Dash board ನಲ್ಲಿ ನಿರ್ವಹಿಸುವುದು.

4. ಮಹಿಳಾ ಸ್ವ-ಸಹಾಯ ಸಂಘಗಳನ್ನು ಗುರುತಿಸಲು ಅನುಸರಿಸಬೇಕಾದ ಪ್ರಕ್ರಿಯೆ.

- ಪತ್ರಿಕಾ ಪ್ರಕಟಣೆ ಹೊರಡಿಸಿ, ಅರ್ಹ ಮತ್ತು ಆಸಕ್ತ ಮಹಿಳಾ ಸ್ವ-ಸಹಾಯ ಸಂಘಗಳನ್ನು ಗುರುತಿಸುವುದು. (ಮಾದರಿ ನಮೂನೆ ಲಗತ್ತಿಸಿದೆ).
- ಅರ್ಹತೆ ಮತ್ತು ಮಾನದಂಡವನ್ನು ಪೂರೈಸುವ ಮಹಿಳಾ ಸ್ವ-ಸಹಾಯ ಗುಂಪಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯಿಂದ ಕಾರ್ಯಾದೇಶ ನೀಡುವುದು.
- ಸ್ವ-ಸಹಾಯ ಸಂಘದ ಅಧ್ಯಕ್ಷರು/ಪ್ರತಿನಿಧಿ-1 ಮತ್ತು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು ಜಂಟಿ ಒಡಂಬಡಿಕೆಯನ್ನು ಮಾಡಿಕೊಳ್ಳುವುದು.

5. ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ /ಪಟ್ಟಣ ಪಂಚಾಯಿತಿಗಳ ಜವಾಬ್ದಾರಿಗಳು:

- ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯಲ್ಲಿ ಡೇ-ಎನ್‌ಯುಎಲ್‌ಎಂ ಅಭಿಯಾನದ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳೊಂದಿಗೆ ನಗರ ಸ್ಥಳೀಯ ಸಂಸ್ಥೆವಾರು ಅರ್ಹ ಮತ್ತು ಆಸಕ್ತ ಮಹಿಳಾ ಸ್ವ-ಸಹಾಯ ಸಂಘಗಳನ್ನು ಗುರುತಿಸುವುದು.
- ಬೇಡಿಕೆಯ ತಃಖ್ತೆ ಸಿದ್ಧಪಡಿಸಿ, ಆಯ್ಕೆಯಾದ ಮಹಿಳಾ ಸ್ವಸಹಾಯ ಸಂಘಕ್ಕೆ ನೀಡುವುದು.
- ವಸೂಲಾತಿಗೆ ಸಂಬಂಧಿಸಿದ ಅಗತ್ಯ ಯಂತ್ರೋಪಕರಣದ (POS Machine) ಪೂರೈಕೆ ಮಾಡಲು ಕ್ರಮ ವಹಿಸುವುದು.
- ಆಯ್ಕೆಯಾದ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಗುರುತಿನ ಚೀಟಿ ನೀಡುವುದು.
- ತೆರಿಗೆ/ ಶುಲ್ಕ ವಸೂಲಾತಿ ಸಂದರ್ಭದಲ್ಲಿ ನಗರ ಸ್ಥಳೀಯ ಸಂಸ್ಥೆಯ ಅಧಿಕೃತ ಸಿಬ್ಬಂದಿಗಳು ಮಹಿಳಾ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಕಾಲಕಾಲಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು.
- ಪ್ರತಿ ದಿನ ಸಂಗ್ರಹಿಸಲ್ಪಟ್ಟ ತೆರಿಗೆ/ಶುಲ್ಕದ ವಿವರಗಳನ್ನು ಆಯಾ ದಿನವೇ ಅಥವಾ ಮರು ದಿನ ಕಂದಾಯ ಶಾಖೆಯಿಂದ ಪಡೆದುಕೊಳ್ಳುವುದು.
- ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪು/ಸದಸ್ಯರ ಸೇವೆಯನ್ನು ಉದ್ದೇಶಿತ ಚಟುವಟಿಕೆಗೆ ಮಾತ್ರ ಬಳಸಿಕೊಳ್ಳುವುದು, ನಗರ ಸ್ಥಳೀಯ ಸಂಸ್ಥೆಯ ಇತರೆ ಚಟುವಟಿಕೆಗಳಿಗೆ ಬಳಸಿಕೊಳ್ಳತಕ್ಕದ್ದಲ್ಲ.
- ಆಸ್ತಿ ತೆರಿಗೆ ವಸೂಲಾತಿ ಮತ್ತು ನೀರಿನ ಶುಲ್ಕ ವಸೂಲಾತಿಗೆ ಗುರುತಿಸಿ ತೊಡಗಿಸಿಕೊಳ್ಳುವ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ವಾರ್ಡ್ ಹಂಚಿಕೆ ಮಾಡುವುದು.
- ಆಸ್ತಿ ತೆರಿಗೆ ವಸೂಲಾತಿ ಮತ್ತು ನೀರಿನ ಶುಲ್ಕ ವಸೂಲಾತಿ ಮಾಡಬೇಕಾದ ವಿವರ ಸಲ್ಲಿಸಬೇಕಾದ ಪೂರಕ ದಾಖಲಾತಿ ಇತ್ಯಾದಿಗಳ ಕುರಿತು ಮಹಿಳಾ ಸ್ವ-ಸಹಾಯ ಗುಂಪಿಗೆ ಮಾಹಿತಿಯನ್ನು ನೀಡುವುದು.
- ನಗರ ಸ್ಥಳೀಯ ಸಂಸ್ಥೆಗಳು ಆಹ್ವಾನಿಸಲಾಗುವ ಪತ್ರಿಕಾ ಪ್ರಕಟಣೆ ಬಗ್ಗೆ ವ್ಯಾಪಕ ಪ್ರಚಾರ ಮಾಡುವುದು.
- ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ತರಬೇತಿ ಅವಶ್ಯಕತೆಗಳ ಬಗ್ಗೆ ಗುರುತಿಸುವುದು ಮತ್ತು ತರಬೇತಿಯನ್ನು ನೀಡುವುದು.
- ನಗರ ಸ್ಥಳೀಯ ಸಂಸ್ಥೆಯಲ್ಲಿ ಕೆಳಕಂಡಂತೆ ಸಮಿತಿಯ ರಚನೆ ಮಾಡಿ ಕಾರ್ಯಗಳನ್ನು ನಿರ್ವಹಿಸುವುದು.

ಕ್ರ. ಸಂ	ಪದನಾಮ	ಹುದ್ದೆ
1	ಆಯುಕ್ತರು/ಪೌರಾಯುಕ್ತರು/ ಮುಖ್ಯಾಧಿಕಾರಿಗಳು	ಅಧ್ಯಕ್ಷರು
2	ಕಂದಾಯ ಶಾಖೆಯ ಮುಖ್ಯಸ್ಥರು	ಸದಸ್ಯ ಕಾರ್ಯದರ್ಶಿ ಸದಸ್ಯರು
3	ಕಿರಿಯ/ಸಹಾಯಕ ಅಭಿಯಂತರರು	ಸದಸ್ಯರು
4	ಸಮುದಾಯ ಸಂಘಟನಾಧಿಕಾರಿ/ ಸಮುದಾಯ ಸಂಘಟಕರು	ಸದಸ್ಯರು
5	ಸಮಿತಿಯ ಅಧ್ಯಕ್ಷರು ಸೂಚಿಸುವ ಇತರೆ ನಾಮನಿರ್ದೇಶಿತ ಅಧಿಕಾರಿ/ಸಿಬ್ಬಂದಿ	ಸದಸ್ಯರು

ಸಮಿತಿಯು ನಿರ್ವಹಿಸಬೇಕಾದ ಕಾರ್ಯಗಳು;

- ಪತ್ರಿಕಾ ಪ್ರಕಟಣೆ ಹೊರಡಿಸಿ, ಅರ್ಹ ಮತ್ತು ಆಸಕ್ತ ಮಹಿಳಾ ಸ್ವ-ಸಹಾಯ ಸಂಘಗಳನ್ನು ಗುರುತಿಸುವುದು.
- ಪತ್ರಿಕಾ ಪ್ರಕಟಣೆಯಂತೆ ಮಹಿಳಾ ಸ್ವ-ಸಹಾಯ ಗುಂಪುಗಳು ಸಲ್ಲಿಸಿರುವ ದಾಖಲಾತಿಗಳ ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡುವುದು.
- ಅಂತಿಮವಾಗಿ ಆಯ್ಕೆಯಾದ ಅರ್ಹ ಮಹಿಳಾ ಸ್ವ-ಸಹಾಯ ಗುಂಪುಗಳ ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅನುಮೋದನೆಗೆ ಸಲ್ಲಿಸುವುದು.
- ನಗರ ಸ್ಥಳೀಯ ಸಂಸ್ಥೆಯ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ಬೇಡಿಕೆಗೆ ಅನುಗುಣವಾಗಿ ಮಹಿಳಾ ಸ್ವಸಹಾಯ ಸಂಘಗಳನ್ನು ಆಯ್ಕೆ ಮಾಡುವುದು. ಆಸ್ತಿ ತೆರಿಗೆ ಒಟ್ಟು ಬೇಡಿಕೆಯ ರೂ. 50.00 ಲಕ್ಷ ಮತ್ತು ನೀರಿನ ಶುಲ್ಕ ರೂ. 10.00 ಲಕ್ಷ ಗಳಿಗೆ ಒಂದರಂತೆ ಸ್ವ ಸಹಾಯ ಸಂಘವನ್ನು ನೇಮಕ ಮಾಡಿಕೊಳ್ಳುವುದು. ನೇಮಕ ಮಾಡಿಕೊಂಡ ಸ್ವಸಹಾಯ ಸಂಘಗಳಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ವಸೂಲಾತಿಗೆ ವಾರ್ಡ್ ಗಳ ಹಂಚಿಕೆ ಮಾಡಿ, ವ್ಯಾಪ್ತಿಯನ್ನು ನಿರ್ಧಿಷ್ಟ ಪಡಿಸುವುದು.
- ಕರ ವಸೂಲಿಗೆ ಅಡೆ-ತಡೆ/ಕ್ಷೇತ್ರದಲ್ಲಿ ತೊಂದರೆಗಳು ಕಂಡುಬಂದಲ್ಲಿ ಬಗೆಹರಿಸುವುದು.
- ಪ್ರತಿ ತ್ರೈಮಾಸಿಕವಾಗಿ ಮಹಿಳಾ ಸ್ವ-ಸಹಾಯ ಗುಂಪು/ಸದಸ್ಯರ ಕಾರ್ಯದ ಬಗ್ಗೆ ಮೌಲ್ಯಮಾಪನ ಮಾಡುವುದು.

- ವಸೂಲಾತಿ ಸಮಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ನಷ್ಟ ಉಂಟುಮಾಡಿದಲ್ಲಿ ಅಂತಹ ಮಹಿಳಾ ಸ್ವ-ಸಹಾಯ ಗುಂಪಿನ ಒಡಂಬಡಿಕೆಯನ್ನು ರದ್ದುಪಡಿಸುವುದು ಹಾಗೂ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದು.

6. ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪಿನ ಜವಾಬ್ದಾರಿಗಳು

- ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯೊಂದಿಗೆ ಉದ್ದೇಶಿತ ಚಟುವಟಿಕೆಯ ಬಗ್ಗೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು.
- ನಗರ ಸ್ಥಳೀಯ ಸಂಸ್ಥೆಯಿಂದ ನಿಗದಿಪಡಿಸಲಾದ ಕರ ವಸೂಲಿಯ ಗುರಿಯ ಸಾಧನೆಗೆ ಕ್ರಮವಹಿಸುವುದು.
- ದೈನಂದಿನ ಸಂಗ್ರಹಣೆ/ವಸೂಲಾತಿಯ ಬಗ್ಗೆ ಸಂಬಂಧಪಟ್ಟ ಕಂದಾಯ ಶಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ವರದಿ ಸಲ್ಲಿಸುವುದು.
- ಕ್ಷೇತ್ರದಲ್ಲಿ ಯಾವುದೇ ಅಡೆ-ತಡೆ/ತೊಂದರೆಗಳು ಕಂಡುಬಂದಲ್ಲಿ ನಗರ ಸ್ಥಳೀಯ ಸಂಸ್ಥೆಯ ಸಂಬಂಧಪಟ್ಟ ಕಂದಾಯ ಶಾಖೆಯ ಅಧಿಕಾರಿ/ಸಿಬ್ಬಂದಿಗಳ ಗಮನಕ್ಕೆ ತರತಕ್ಕದ್ದು.
- ಸ್ವೀಕೃತ ತೆರಿಗೆ / ಶುಲ್ಕ ದುರುಪಯೋಗ ಆಗದಂತೆ ಕ್ರಮವಹಿಸುವುದು.
- ನಗರ ಸ್ಥಳೀಯ ಸಂಸ್ಥೆಯಿಂದ ಸೂಚಿಸಲಾಗುವ ದಾಖಲಾತಿಗಳ ನಿರ್ವಹಣೆ ಮಾಡುವುದು.
- ಕರ ವಸೂಲಾತಿಗೆ ಕ್ಷೇತ್ರಕ್ಕೆ ಭೇಟಿ ನೀಡುವಾಗ ಕಡ್ಡಾಯವಾಗಿ ಗುರುತಿನ ಚೀಟಿ ಧರಿಸುವುದು.
- ಆಯ್ಕೆಯಾದ ಸ್ವ-ಸಹಾಯ ಗುಂಪಿನ ಮೂಲಕ ಹಾಗೂ ಸದರಿ ಗುಂಪಿನ ಸದಸ್ಯರ ಮೂಲಕವೇ ಬೆಳಿಗ್ಗೆ 8.00 ಗಂಟೆಯಿಂದ ಸಾಯಂಕಾಲ 6.00 ಗಂಟೆವರೆಗೆ ಕರ ವಸೂಲಾತಿ ಕಾರ್ಯಮಾಡುವುದು. ಯಾವುದೇ ಉಪ –ಗುತ್ತಿಗೆ ನೀಡತಕ್ಕದ್ದಲ್ಲ.
- ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪಿನ ಸದಸ್ಯರು ಮಾತ್ರ ವಸೂಲಾತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಇತರೆ ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಇತರೆ ವ್ಯಕ್ತಿ/ಸಂಸ್ಥೆ ತೊಡಗಿಸಿಕೊಂಡು ವಸೂಲಾತಿ ಮಾಡಲು ಅವಕಾಶ ಇರುವುದಿಲ್ಲ.
- ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪಿನ ಅಧ್ಯಕ್ಷರು ಕರ ವಸೂಲಾತಿಯಲ್ಲಿ ತೊಡಗಿಸಿಕೊಳ್ಳುವ ಗುಂಪಿನ ಸದಸ್ಯರ ಹೆಸರು, ದೂರವಾಣಿ ಸಂಖ್ಯೆ ಇತ್ಯಾದಿ ವಿವರವನ್ನು ಲಿಖಿತ ರೂಪದಲ್ಲಿ ನಗರ ಸ್ಥಳೀಯ ಸಂಸ್ಥೆಯ ಕಂದಾಯ ಶಾಖೆಗೆ ಸಲ್ಲಿಸುವುದು.
- ನಗರ ಸ್ಥಳೀಯ ಸಂಸ್ಥೆಯಿಂದ ಆಯೋಜಿಸಲಾಗುವ ಪ್ರಗತಿ ಪರಿಶೀಲನಾ ಸಭೆಗೆ ನಿಯಮಿತವಾಗಿ ಹಾಜರಾಗುವುದು.
- ಕರ ವಸೂಲಾತಿಗೆ ತೊಡಗಿಸುವಕೊಳ್ಳುವ ಮಹಿಳಾ ಸ್ವ-ಸಹಾಯ ಗುಂಪಿನ ಸದಸ್ಯರು ಪ್ರೋತ್ಸಾಹಧನವನ್ನು ಹೊರತುಪಡಿಸಿ ಇತರೆ ಯಾವುದೇ ಭತ್ಯೆ, ಸೇವೆ ಇತ್ಯಾದಿಗಳಿಗೆ ಅರ್ಹರಿರುವುದಿಲ್ಲ.
- Demand ನೋಟಿಸ್ ನೀಡಿ online ಮೂಲಕ ವಸೂಲಾತಿ ಮಾಡುವುದು. ನಗದು ರೂಪದಲ್ಲಿ ವಸೂಲಾತಿ ಮಾಡಬಾರದು.

7. ಆಯ್ಕೆಯಾದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಆಯೋಜಿಸಬೇಕಾದ ತರಬೇತಿಗಳ ವಿವರ

- ಕರ ವಸೂಲಾತಿಗೆ ಸಂಬಂದಿಸಿದಂತೆ ನಿರ್ವಹಿಸಬೇಕಾದ ದಾಖಲಾತಿಗಳ ಪಟ್ಟಿಯ ಬಗ್ಗೆ.
- ದಾಖಲಾತಿಗಳ ನಿರ್ವಹಣೆಯ ಬಗ್ಗೆ.
- ವರದಿ ಸಿದ್ದಪಡಿಸುವ ಬಗ್ಗೆ.
- ಕರ ವಸೂಲಾತಿ ಯಂತ್ರೋಪಕರಣದ ನಿರ್ವಹಣೆಯ ಬಗ್ಗೆ.
- ವಾರ್ಡ್/ಪ್ರದೇಶವಾರು ಕಾರ್ಯ ಹಂಚಿಕೆ ಮತ್ತು ಕಾರ್ಯನಿರ್ವಹಣೆ ಬಗ್ಗೆ.
- Soft skill ತರಬೇತಿ (ಸಂಹವನ, ಸಂಪರ್ಕ,ಸಮಯ ಪಾಲನೆ,ಪಾರದರ್ಶಕತೆ ಇತ್ಯಾದಿ).

8. **ಮೇಲ್ಮನವಿ ಪ್ರಾಧಿಕಾರ**

ಮಹಾನಗರಪಾಲಿಕೆಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಸಂಬಂಧಪಟ್ಟ ಜಿಲ್ಲೆಗಳವರು ಸದರಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ.

9.ಪ್ರಶಸ್ತಿ ಪ್ರಶಂಸನೆ ನೀಡುವ ಬಗ್ಗೆ

- ತೆರಿಗೆ ಮತ್ತು ಶುಲ್ಕ ವಸೂಲಾತಿಗೆ ಆಯ್ಕೆಯಾದ ಮಹಿಳಾ ಸ್ವಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ವಸೂಲಾತಿ ಮಾಡಲಾದ ಜಿಲ್ಲೆಯ ಮೂರು ಮಹಿಳಾ ಸ್ವಸಹಾಯ ಗುಂಪುಗಳಿಗೆ ಸ್ವಾತಂತ್ರ್ಯ ದಿನಾಚರಣೆಯಂದು ಜಿಲ್ಲಾ ಹಂತದಲ್ಲಿ ಪ್ರಶಂಸನಾ ಪ್ರಮಾಣ ಪತ್ರ ವಿತರಿಸಲು ಕ್ರಮವಹಿಸುವುದು.

ಸರ್ಕಾರದ ಉಲ್ಲೇಖ (1)ರ ಆದೇಶದಂತೆ ಮೇಲ್ಕಂಡ ಮಾರ್ಗಸೂಚಿಗಳನ್ನು ಅನುಸರಿಸಿ, ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿ ಕಾರ್ಯವನ್ನು ಸಮರ್ಪಕವಾಗಿ ಮಾಡಲು ಅಗತ್ಯ ಕ್ರಮ ವಹಿಸುವುದು. ಮಹಿಳಾ ಸ್ವಸಹಾಯ ಗುಂಪುಗಳನ್ನು ವಸೂಲಾತಿ ಕಾರ್ಯಕ್ಕೆ ನೇಮಕ ಮಾಡಿಕೊಂಡರೂ ಸಹ ನಗರ ಸ್ಥಳೀಯ ಸಂಸ್ಥೆಯ ಅಧಿಕಾರಿ/ಸಿಬ್ಬಂದಿಗಳು ನಗರ ಸ್ಥಳೀಯ ಸಂಸ್ಥೆಗಳಿಗೆ ಬರಬೇಕಾದ ಆಸ್ತಿ ತೆರಿಗೆ/ನೀರಿನ ಶುಲ್ಕಗಳನ್ನು ವಸೂಲಿ ಮಾಡಲು ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿಗೆ ಅಗತ್ಯ ಕ್ರಮಗಳನ್ನು ವಹಿಸಲು ಸೂಚಿಸಿದೆ.

Signed by
Kavalikatti Prabhuling
Date: 29-10-2024 17:48:11

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರು , ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಸದರಿ ಸುತ್ತೋಲೆಯನ್ನು ಅನುಷ್ಠಾನಗೊಳಿಸುವ ಕುರಿತು.
3. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ (ಮಹಾನಗರ ಪಾಲಿಕೆಗಳನ್ನು ಒಳಗೊಂಡಂತೆ), ಸೂಕ್ತ ಕ್ರಮಕ್ಕಾಗಿ.